

# ಕ್ರಿಪ್ಟೋಕರೆನ್ಸಿ ಜಗತ್ತು!



# <u>ಕ್ರಿಪ್ಟೋಕರೆನ್ಸಿ ಜಗತ್ತು- ಹೂಡಿಕೆ ಮತ್ತು ಬಳಕೆ</u>

## <u>ಸರಳವಾದ ಒಂದು ಕೈಪಿಡಿ</u>

**ಸಂಗ್ರಹ  ಲೇಖನ: ನಾಗೇಶ್ ಕುಮಾರ್ ಸಿಎಸ್**

## Disclaimer/ ಓದುವ ಮುನ್ನ ಸೂಚನೆ:

1. ನೀವು ಇದನ್ನು ತೆರೆದ ಮನಸ್ಸಿನಿಂದ ಓದಿ, ನಿಮಗೆ ಇಷ್ಟವಾದರೆ ಮಾತ್ರ ಮತ್ತೆ ಕೆಲವು ಎಕ್ಸ್‌ಪರ್ಟ್ಸ್ ಜತೆ ಚರ್ಚಿಸಿ ನಿರ್ಧರಿಸಿ ಕ್ರಿಪ್ಟೋನಲ್ಲಿ ಹಣ ಹೂಡಲು ಮುಂದೆ ಕಾಲಿಡಿ.
2. ಎಲ್ಲಾ ಮ್ಯೂಚುಯಲ್ ಫಂಡ್ಸ್ ಮತ್ತು ಷೇರು ತರಹ ಹಣದ ವಹಿವಾಟಿನಲ್ಲಿ ಇದರಲ್ಲಿ ರಿಸ್ಕ್ ಇದೆಯಾದರೂ ಇದಕ್ಕೆ ಅವಕ್ಕೆ ಇರುವಂತಹಾ ಕೇಂದ್ರ ಸರಕಾರದ ಲಿಖಿತ ಮನ್ನಣೆ ಈ ವಹಿವಾಟಿಗೆ ಸಿಕ್ಕಿಲ್ಲ. ಆದರೂ ಸರಕಾರಿ ವ್ಯವಸ್ಥೆಯ ಹೊರತಾಗಿ ಇದು ಈಗ ಸುಮಾರು ರೂ. 40,000 ಕೋಟಿ ಮೌಲ್ಯದ ಉದ್ಯಮವಾಗಿದೆ
3. ಈ ಪೆಡಂಭೂತವಾಗಿ ಬೆಳೆಯುತ್ತಿರುವ ಕ್ರಿಪ್ಟೋಕರೆನ್ಸಿಯ ಆದಾಯವನ್ನು ಗುರುತಿಸಿ ಕೇಂದ್ರ ಸರ್ಕಾರದ ವಿತ್ತ ಮಂತ್ರಿ ಇದನ್ನು ಡಿಜಿಟಲ್ ಆಸೆಟ್ ( ಆಸ್ತಿ ಸಂಪತ್ತು) ಎಂದು 30% ತೆರಿಗೆ ಹಾಕಲೂ ಘೋಷಿಸಿ ಒಂದು ರೀತಿಯ 'ಪರೋಕ್ಷ ಮಾನ್ಯತೆ' ನೀಡಿಯೂ ಇದ್ದಾರೆ, ಈ ವರ್ಷದ ಬಜೆಟ್ಟಿನಲ್ಲಿ. ಮುಂದೆ ಇವು ಅಧಿಕೃತ ತೆರಿಗೆ ವ್ಯವಹಾರವೇ (taxable income) ಆಗುವ ಲಕ್ಷಣವೂ ಇದೆ.
4. ನಿಮಗೆ ಇದು ಏನು ಎತ್ತ, ಯಾವ್ಯಾವ ನಾಣ್ಯಗಳಿವೆ, ಅದನ್ನು ನಾವು ಎಲ್ಲಿ ಕೊಳ್ಳಬಹುದು, ಮಾರಬಹುದು, ಬ್ಯಾಂಕ್ ಮೂಲಕವೇ, ಯು ಪಿ ಐ, ಇತ್ಯಾದಿ ಮಾಹಿತಿಯ ಕುತೂಹಲವಿದ್ದರೆ ಮುಂದುವರೆಯಿರಿ, ಇಲ್ಲಿ ನಾನು ಬಳಸಿದ ಲಿಂಕುಗಳ ಸಮೇತ ಇಲ್ಲಿ ಕೊಡುವ ಚಿಕ್ಕ ಪ್ರಯತ್ನವನ್ನು ಮಾಡಿದ್ದೇನೆ.
5. ನನ್ನದೇ ಈ ಬಗ್ಗೆ ಅಂತಿಮ ವಾಕ್ಯವಲ್ಲ. ಈ ಬಗ್ಗೆ ಅನುಭವೀ ಪರಿಣಿತರ ಸಲಹೆ ಪಡೆಯಿರಿ ಸ್ಪಷ್ಟೀಕರಣಕ್ಕೆ!
6. ಹಾಗಾಗಿ ಇದನ್ನು "ಗೈಡ್ ಫಾರ್ ಡಮ್ಮೀಸ್ ' ಅಥವಾ 'ಬಿಗಿನ್ನರ್ಸ್' (ಸರಳ, ಅರಿಯದವರಿಗೆ ಮಾರ್ಗದರ್ಶಿ) ಎನ್ನುವುದಿಲ್ಲವೇ ಹಾಗೇ ಉಪಯೋಗಿಸಿ. ಅದಕ್ಕಾಗಿಯೇ ಇದನ್ನು ಉಚಿತ ಡೌನ್‌ಲೋಡ್ ಕೊಡುತ್ತಿದ್ದೇನೆ.
7. ನಿಮಗೆ ನಷ್ಟ/ ಲಾಭ ಏನೇ ಆದರೂ ಈ ಲೇಖನ/ಲೇಖಕ ಅಂತೂ ಕಾರಣವಾಗಬಾರದು. ಇದು ಕೇವಲ ಪರಿಚಯ ಲೇಖನ ಮಾತ್ರ.
8. ನಾನು ಇದಕ್ಕಾಗಿ ಯಾವುದೇ ಕಾಯಿನ್ ಅಥವಾ ಸಂಸ್ಥೆಯ ಶಿಫಾರಸ್ಸಿನ ಲಾಭ ಪಡೆಯುವವನೂ ಅಲ್ಲ!

**1) <u>ಹಿನ್ನೆಲೆ:</u>**

ಕೆಲವು ತಿಂಗಳ ಹಿಂದೆ 'ಹಣ ಹಣ! ಝಣ ಝಣ'! ಎಂಬ ಹಳೇ ಕನ್ನಡ ಅನುವಾದಿತ ಚೇಸ್ ಕಾದಂಬರಿಯ ಶೀರ್ಷಿಕೆ ಕಣ್ಣಿಗೆ ಬಿತ್ತು.
ಹಾಗೆ ಜಣಜಣ ಎಂದು ಸದ್ದು ಮಾಡುವುದು ನಾಣ್ಯಗಳೇ! ಆದರೆ ಸದ್ದೇ ಮಾಡದ, ಕೈಗೆ ಸ್ಪರ್ಷಕ್ಕೂ ಸಿಗದ ಅಂತರ್ಜಾಲ ಲೋಕದ ನಿಗೂಢ ನಾಣ್ಯಗಳು ಈಗ ಬಂದಿವೆಯಂತಲ್ಲ ಎಂಬ ಕುತೂಹಲ ಕಾಡಿದಾಗ ಮಿತ್ರ ಲೇಖಕ ವಿಠ್ಠಲ್ ಶೆಣೈಯವರ **ನಿಗೂಢ ನಾಣ್ಯ** ಎಂಬ ಕಾದಂಬರಿ ಕಣ್ಸೆಳೆಯಿತು.
ಅದರಲ್ಲಿ ಲೇಖಕರು ಬಹಳ ಅಧ್ಯಯನ ಮಾಡಿ ಕ್ರಿಪ್ಟೋಕರೆನ್ಸಿ ಎಂಬ ವಾಣಿಜ್ಯ ಜಗತ್ತಿನ ಸ್ಥೂಲ ಪರಿಚಯ ಇತ್ತು ಅದರ ಸಾಧಕ, ಭಾಧಕದ ಪರಿಚಯ ಇತ್ತು ಒಂದು ಕಥಾವಸ್ತುವಿನಲ್ಲಿ ಅಡಕ ಮಾಡಿ ರಹಸ್ಯಮಯ ಕಥೆಯನ್ನು ಹೆಣೆದಿದ್ದರು.
ಅದನ್ನು ಓದಿದ ನಂತರ ಆಗಾಗ ನಾನೂ ಈ ಕ್ರಿಪ್ಟೋಕರೆನ್ಸಿ ಎನಿಸಿಕೊಳ್ಳುವ ಬ್ಲಾಕ್ ಚೈನ್ ತಂತ್ರಜ್ಞಾನದ ನಾಣ್ಯಗಳ ವಹಿವಾಟಿನ ಬಗ್ಗೆ ಅಂತರ್ಜಾಲವನ್ನು ಹೆಕ್ಕಿ ನೋಡುತ್ತಲೇ ಇದ್ದೆ. ಕುತೂಹಲ ತಡೆಯಲಾಗದೇ ಎಲ್ಲಾ ಹಣದ ವಹಿವಾಟುಗಳ ತರಹ ಇದರಲ್ಲೂ ರಿಸ್ಕ್ ಎಂಬುದು ಇದೆಯಂದು ನನಗೆ ನಾನೇ ಮನವರಿಕೆ ಮಾಡಿಕೊಂಡು ಸಹಸ್ರಾರು ಕೋಟಿ ಮೌಲ್ಯದ ಈ ವಾಣಿಜ್ಯಲೋಕದಲ್ಲಿ ನಾನೂ ಅಂಬೆಗಾಲಾದರೂ ಇಡೋಣ, ನೋಡಿಯೇ ಬಿಡುವಾ ಎಂದು ನಿರ್ಧರಿಸಿದೆ. ಹೇಗೂ ನನ್ನ ನಿವೃತ್ತಿ ಉಳಿತಾಯವನ್ನು ಅದೇ

ಸಮಯದಲ್ಲೇ ಮ್ಯೂಚುಯಲ್ ಫಂಡಿನಲ್ಲಿ ತೊಡಗಿಸುತ್ತಲೂ ಇದ್ದೀನಲ್ಲ. ನಾಲ್ಕರ ಜತೆ ಮತ್ತೊಂದು ಎಂದು ಚಿಕ್ಕ ಮೊತ್ತ ಇಲ್ಲಿಯೂ ತೊಡಗಿಸಲು ಮುಂದಾದೆ.
**ನಾನೋ ವಾಣಿಜ್ಯ ಲೋಕದ ಪರಿಚಯವೂ ಇಲ್ಲದ ಇಂಜಿನಿಯರ್, ಇದೀಗ ಪತ್ತೇದಾರಿ ಲೇಖಕ**, ಇದು ನನಗೆ ಬಹಳವೇ
ಹೊಸದಾದರಿಂದ, ಅಪರಿಚಿತವಾದ್ದರಿಂದ ನಾನು ಏನೇನು ಮಾಡಿದ್ದೇನೆ ಎಂಬುದನ್ನು ಕನ್ನಡದಲ್ಲಿ ಕೈಪಿಡಿಯಂತೆ ಬರೆಯುವಾ ಎಂದೂ ತಿಳಿದು ಈ ಲೇಖನ ಬರೆಯುತ್ತಿದ್ದೇನೆ ಅಷ್ಟೇ.
ಇದಕ್ಕೆ ಮೊದಲು ರಂಗನಾಥ ಮೂಕನಹಳ್ಳಿಯವರ 'ಷೇರು ಸಾಮ್ರಾಜ್ಯ' ಪುಸ್ತಕ ಓದಿ ಹಣಕಾಸಿನ ವ್ಯವಹಾರದ ಬಗ್ಗೆ ಇನ್ನಷ್ಟು ವಿಷಯಗಳು ಸ್ಪಷ್ಟವಾದವು.

ಹಾ! ಒಂದು ವಿಷಯ: ಈಗಲೂ ನಾನೇನೂ ಲಕ್ಷಾಂತರ ರೂ. ಸಂಪಾದಿಸಿಯೂ ಇಲ್ಲ, ಅದರ ನಿರೀಕ್ಷೆಯೂ ನನಗಿಲ್ಲ. ಚಿಕ್ಕ ಪುಟ್ಟ ಹೂಡಿಕೆ ಮಾತ್ರ ಮಾಡಿದ್ದೇನೆ. ನಿಮಗೂ ಅದಕ್ಕೆಂದೇ ಈ ಮಾಹಿತಿ/ ಪರಿಚಯ ಗೈಡ್ ಕೊಡುತ್ತಿದ್ದೇನೆ.

## 2) <u>ಮೊದಲಿಗೆ ಕೆಲವು ಸಂದೇಹ ನಿವಾರಣೆ:</u>

### 2.1 ಪ್ರಶ್ನೆ: ಇದು ಮೋಸವೇ, ವಂಚನೆಯೆ, ಅಪರಾಧವೇ?

ಉತ್ತರ- ಅಲ್ಲ, ಇದು ಜಗತ್ತಿನಾದ್ಯಂತ ಹರಡಿರುವ ವಾಣಿಜ್ಯ ಜಾಲ, ಬ್ಲಾಕ್ ಚೈನ್ ಟೆಕ್ನಾಲಜಿ ಎಂಬ ಆಧಾರದಲ್ಲಿ, ಇದು ಒಂದು ಬಹಳ ಖಾಸಗಿ ನೆಟ್ ವರ್ಕ್ ಮೂಲಕ ಕಂಪ್ಯೂಟರುಗಳ ಜಾಲದ ಮೂಲಕ ವಹಿವಾಟು ನಡೆಸುವಂತದ್ದು. ನಮ್ಮ ಹಣ, ನಮ್ಮ ರಿಸ್ಕು ಅಷ್ಟೇ.

ಆದರೆ ಎಲ್ಲಾ ಹಣದ ದುರ್ವ್ಯವಹಾರದಂತೆ ಇದನ್ನೂ ಸಹಾ ದುರ್ಬಳಕೆ ಮಾಡಿಕೊಳ್ಳಬಹುದು.
ಉದಾ. ಈಗ ದೇಶದಲ್ಲಿ ಬಚ್ಚಿಟ್ಟ ಹಣ, ಕಪ್ಪು ಹಣವನ್ನೇ ರಿಸರ್ವ್ ಬ್ಯಾಂಕ್ ನೋಟುಗಳಿಂದಲೇ ತೆರಿಗೆ ಕಟ್ಟದೇ ಮಾಡುವಂತೆ ಅಥವಾ, ಬ್ಯಾಂಕ್ ಸಾಲ ತೆಗೆದುಕೊಂಡು ಪರಾರಿಯಾದಂತೆ, ಕ್ರೆಡಿಟ್ ಕಾರ್ಡಿನಲ್ಲಿ, ಏ ಟಿ ಎಂ ನಲ್ಲಿ ಮೋಸ ಮಾಡಲ್ಲವೆ?.
ಎಲ್ಲಿ ಬೇಕಾದರೂ ಹೀಗೆ ಹಣವಿದ್ದ ಕಡೆ ಅಪರಾಧ ನಡೆಯಬಹುದು.
ಹಾಗಂತ ನಾವು ಯಾರೂ ದುಡ್ಡು ಸಂಪಾದಿಸುವುದನ್ನೇ ನಿಲ್ಲಿಸಿಬಿಟ್ಟಿಲ್ಲವಲ್ಲ?...
ಹೀಗೆ ತಿಳಿದುಕೊಳ್ಳಿ- ನಾವು ನಮ್ಮ ವೈಯಕ್ತಿಕ ಉಳಿತಾಯ/ ಸಂಪಾದನೆಗೆ ಇದನ್ನು ಬಳಸಲು ಕಾನೂನಿನ ತೊಂದರೆಯೇನೂ ಕಂಡುಬರುತ್ತಿಲ್ಲ.

| |
|---|
| ***Is crypto still illegal in India?*** |
| ***"It's not illegal to buy and sell crypto," finance secretary T V Somanathan said in an interview to Bloomberg Television. "We have now put in a taxation framework that treats crypto assets the same way we treat winnings from horse races, or from bets and other speculative transactions," he added.02-Feb-2022*** |

*ಹೆಚ್ಚಿನ ಮಾಹಿತಿಗಾಗಿ ಓದಿ:*

- *https://www.livemint.com/news/india/is-cryptocurrency-legal-tender-in-india-what-we-know-so-far-10-points-11643806115501.html*

- [https://www.etvbharat.com/kannada/karnataka/business/business-news/what-is-the-criteria-for-cryptocurrency-in-india/ka20211113103918114](https://www.etvbharat.com/kannada/karnataka/business/business-news/what-is-the-criteria-for-cryptocurrency-in-india/ka20211113103918114)

2.2 **ಪ್ರಶ್ನೆ:-ಈ ಕ್ರಿಪ್ಟೋಕರೆನ್ಸಿ – (ಬಿಟ್ ಕಾಯಿನ್ ಮುಂತಾದವು) ದೇಶದ ಎಷ್ಟು ದೊಡ್ಡ ಮಾರ್ಕೆಟ್ ಎಂಬ ಅಂದಾಜಿದೆಯೆ?**

ಉತ್ತರ- ಭಾರತದಲ್ಲಿ ಅಂದಾಜು 2 ಕೋಟಿ ಹೂಡಿಕೆದಾರರು 4-5 ಶತಕೋಟಿ ಡಾಲರ್ ಮೌಲ್ಯದ ಕ್ರಿಪ್ಟೋ ಕರೆನ್ಸಿಗಳನ್ನು (**ಅಂದಾಜು 29,600-37,000 ಕೋಟಿ ರೂ**.) ಹೊಂದಿದ್ದಾರೆ ಎನ್ನಲಾಗಿದೆ. (ಅಷ್ಟು ಬೃಹತ್ ಮಾರ್ಕೆಟ್ ಇದು. ನಾವು ನಾಚಿ ಹಿಂಜರಿಯುವಂತದ್ದೇನೂ ಅಲ್ಲ!)

**ಇನ್ನೊಂದು ಅಂದಾಜಿನ ಪ್ರಕಾರ:**

> ***Industry estimates suggest there are 15 million to 20 million crypto investors in India, with total crypto holdings of around 400 billion rupees ($5.37 billion) (40,000 ಕೋಟಿ ರೂ). No official data is available on the size of the Indian crypto market.*** *01-Feb-2022*

(10 **ಮಿಲಿಯನ್- 1 ಕೋಟಿ. 1- ಬಿಲಿಯನ್- 1 ಶತಕೋಟಿ (100 ಕೋಟಿ**))

**2.3 ಪ್ರಶ್ನೆ: ಇದನ್ನು ಕೊಂಡ ಮೇಲೆ ತೆರಿಗೆ ತೆರಬೇಕೆ?**

ಉತ್ತರ– ಇದೀಗ ಭಾರತದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಾರ ಇದರ ಆದಾಯದ ಮೇಲೆ 30% ತೆರಿಗೆ ವಿಧಿಸಲಾಗುವುದು ಎಂದಿದ್ದಾರೆ. ಇನ್ನೂ ಆ ಬಗ್ಗೆ ಹೆಚ್ಚಿನ ವಿವರಗಳನ್ನು ಪ್ರಕಟಿಸಿಲ್ಲ

**2.4 ಪ್ರಶ್ನೆ:-ನಮ್ಮ ದೇಶದ್ದೇ ಆದ ಬಿಟ್‌ಕಾಯಿನ್/ ಅನ್ಯ ನಾಣ್ಯ ಇದೆಯೆ?**

ಉತ್ತರ-ಇನ್ನೂ ಇಲ್ಲ. ಭಾರತ ಸರಕಾರವೇ ಇದೇ ಬ್ಲಾಕ್ ಚೈನ್ ತಾಂತ್ರಿಕತೆ ಉಪಯೋಗಿಸಿ ಡಿಜಿಟಲ್ ರುಪೀ ಎಂಬುದನ್ನು ಹೊರತರುತ್ತಾರೆಂದು ಇತ್ತೀಚೆಗೆ ಘೋಷಿಸಿದೆ.

| **Is India making its own cryptocurrency?** |
|---|
| **Digital Rupee is India's own cryptocurrency that will be launched via the RBI. Know details here. Digital Rupee is happening! On February 1 while announcing the new budget for 2022-23, Union Finance Minister Nirmala Sitharaman confirmed that India is getting a centralised digital currency in the financial year 2022-23** |

**2.5 ಪ್ರಶ್ನೆ: -ಈ ನಾಣ್ಯಗಳನ್ನು ಕೊಂಡು ನಾವು ಮನೆಯಲ್ಲಿ ಇಟ್ಟುಕೊಳ್ಳಬಹುದೆ?**

ಉತ್ತರ -ಸಾಧ್ಯವಿಲ್ಲ. ಇವು ಯಾವುವೂ ಭೌತಿಕ ನಾಣ್ಯದಂತೆ ಕೈಗೆ ಸಿಗುವುದೂ, ಎಣಿಸಿಟ್ಟುಕೊಳ್ಳುವಂತದ್ದಲ್ಲ. ಡಿಜಿಟಲ್ ರೂಪದಲ್ಲಿ ಅಂದರೆ ನಿಮ್ಮ ಆನ್ಲೈನ್ ಖಾತೆಯಲ್ಲಿ ಕಂಪ್ಯೂಟರ್ ಅಥವಾ ಮೊಬೈಲಿನಲ್ಲಿ ಮಾತ್ರ ನೋಡಬಹುದು ಅಷ್ಟೇ! ಕ್ಯಾಶ್ ರೂಪದಲ್ಲಿ ಅಲ್ಲ! ಅವನ್ನು ಮಾರಿ ಕ್ಯಾಶಿನಂತೆ ಬದಲಿಸಿಕೊಳ್ಳಬಹುದು ಅಷ್ಟೇ.

**2.6 ಪ್ರಶ್ನೆ: -ಇವನ್ನೆಲ್ಲಾ ಆರ್ ಬಿ ಐ ನಿಷೇಧಿಸಿದ್ದರಲ್ಲಾ, ಏನಾಯಿತು?**

**- ಆರ್‌ಬಿಐ (RBI) ನಿಷೇಧ ತೆರವುಗೊಳಿಸಿದ ಸುಪ್ರೀಂಕೋರ್ಟ್(Supreme Court):- ಮಾರ್ಚ್ 2020 ರಲ್ಲಿ, ಕೇಂದ್ರ ಬ್ಯಾಂಕ್, ಕ್ರಿಪ್ಟೋಕರೆನ್ಸಿ ನಿಷೇಧವನ್ನ ಸುಪ್ರೀಂಕೋರ್ಟ್ ರದ್ದುಗೊಳಿಸಿದೆ. ವಿನಿಮಯ ಕೇಂದ್ರಗಳು ಮತ್ತು- ವ್ಯಾಪಾರಿಗಳಿಂದ ಕ್ರಿಪ್ಟೋಕರೆನ್ಸಿ ವಹಿವಾಟುಗಳನ್ನು ನಿರ್ವಹಿಸಲು ಸುಪ್ರೀಂ ಬ್ಯಾಂಕುಗಳಿಗೆ ಅವಕಾಶ ನೀಡಿದೆ**.

**2.7 ಪ್ರಶ್ನೆ:-ಯಾವ್ಯಾವ ವಿದೇಶಗಳಲ್ಲಿ ಕ್ರಿಪ್ಟೋಕರೆನ್ಸಿಗೆ ಮಾನ್ಯತೆ ಇದೆ, ಕಾನೂನಿನ ಪ್ರಕಾರ ಬಳಸಬಹುದು?**


ಉತ್ತರ- ಹೆಸರಿಸಲು:- ಯು. ಎಸ್. ಎ, ಯುರೋಪಿಯನ್ ಯೂನಿಯನ್, ಆಸ್ಟ್ರೇಲಿಯಾ, ಕೆನಡಾದಲ್ಲಿ ನೀವು ಕ್ರಿಪ್ಟೋಕರೆನ್ಸಿ ವ್ಯವಹಾರವನ್ನು ಮಾಡಬಹುದು. ಇನ್ನೂ ಕೆಲವು ದೇಶಗಳ ಲಿಸ್ಟ್ ನೋಡಲು ಈ ಲಿಂಕ್ ಕ್ಲಿಕ್ ಮಾಡಿ:

https://www.investopedia.com/articles/forex/041515/countries-where-bitcoin-legal-illegal.asp

**3) ಕ್ರಿಪ್ಟೋಕರೆನ್ಸಿ ಅಂದರೆ ಯಾವುವು?**

-ಹಲವಾರು ಅನ್ವೇಷಕರು/ ಸ್ಥಾಪಕರು ಈ ಎನ್ಕ್ರಿಪ್ಟೆಡ್ ಬ್ಲಾಕ್ ಚೈನ್ ಎಂಬ ತಂತ್ರಜ್ಞಾನವನ್ನು ಉಪಯೋಗಿಸಿ ಬರೆದ ಈ ನಾಣ್ಯಗಳ ಬಗ್ಗೆ ನಾವು ಟೆಕ್ನಿಕಲ್ ಆಗಿ ತಲೆಕೆಡಿಸಿಕೊಳ್ಳುವುದು ಬೇಡ. ಅದು ಈ ಲೇಖನದ ವ್ಯಾಪ್ತಿಯನ್ನೂ ಮೀರಿದ್ದು. (ನನಗೆ ಹೆಚ್ಚು ಆಸಕ್ತಿಯೂ ಆ ಬಗ್ಗೆ ಇಲ್ಲ)

ಇದೀಗ ಮಾರುಕಟ್ಟೆಯಲ್ಲಿ ಹಲವು ಜನಪ್ರಿಯ ಕ್ರಿಪ್ಟೋ ನಾಣ್ಯಗಳಿವೆ.







a) ಬಿಟ್‌ಕಾಯಿನ್ (BTC)

b) ಇಥೀರಿಯಮ್ (ETH)

c) ರಿಪಲ್ (Ripple)

d) ಬೈನ್ಯಾನ್ಸ್ (BNB)

e) ಟೆದರ್ (USDT)

f) ಸೊಲಾನ (SOL)

g) ಕಾರ್ಡಾನೋ (ADA) ಇತ್ಯಾದಿ ಹಲವು ಬಗೆಯ ನಾಣ್ಯಗಳು ಮೇಲೆ ಚಿತ್ರ ಮತ್ತು ಚಾರ್ಟಿನಲ್ಲಿವೆ.

- ಇವೆಲ್ಲಾ ಸ್ಥಾನಗಳು ಬದಲಾಗುತ್ತಾ ಇರುತ್ತವೆ. ನಾವು ಮಾರ್ಕೆಟ್ಟನ್ನು ಗಮನಿಸುತ್ತಿರಬೇಕು.

*ಮೇಲಿನ ಲಿಸ್ಟಿನಲ್ಲಿ Terra (Luna) ಎಂಬ ಕಾಯಿನ್ ಅನ್ನು ಈಗ ನಿಲ್ಲಿಸಲಾಗಿದೆ. ಅದು ಸಿಗುವುದಿಲ್ಲ.

**ಇತ್ತೀಚೆಗೆ ಕೈಬರ್ (Kyber) ನೆಟ್ವರ್ಕ್ ಎಂಬ ಹೊಸ ನಾಣ್ಯ ಜನಪ್ರಿಯವಾಗುತ್ತಾ ಹೋಗುತ್ತಿದೆ.

ಆದರೆ ಈ ಕ್ರಿಪ್ಟೋ ಜಗತ್ತಿನ ಚಾಂಪಿಯನ್ ಕಾಯಿನ್ನುಗಳಾಗಿ ಮೊದಲೆರಡು- **ಬಿಟ್‌ಕಾಯಿನ್** ಮತ್ತು **ಇಥೀರಿಯಮ್** ಮೆರೆಯುತ್ತಿವೆ.

**4) ಈ ನಾಣ್ಯಗಳ ಬೆಲೆಯೇನು?**


-ಈ ನಾಣ್ಯಗಳ ಬೆಲೆ ಒಂದಕ್ಕೆ 10 ರೂ. ನಿಂದ ಹಲವು ಲಕ್ಷ ರೂ ಸಹಾ ಇರುತ್ತವೆ.

***ಉದಾಹರಣೆಗೆ ಜಿಲ್ಕಾ ಎಂಬ 1 ನಾಣ್ಯ ರೂ. 4/- ಇದ್ದರೆ ದೊಡ್ಡ ನಾಣ್ಯ 1 ಬಿಟ್ ಕಾಯಿನ್ ರೂ. 24 ಲಕ್ಷ ರೂ. ಇದೆ.***

**ಆದರೆ ನೀವು ನಿಮಗೆ ಬೇಕಾದ ಬೆಲೆಗೆ ಬಿಟ್ ಕಾಯಿನ್ ಕೊಳ್ಳಬಹುದು. ಕನಿಷ್ಟ 1 ಕಾಯಿನ್ ಅಂತೇನೂ ಇಲ್ಲ...**

**ಉದಾಹರಣೆಗೆ ಕೆಲವು ಕ್ರಿಪ್ಟೋ ಎಕ್ಸ್ ಚೇಂಝ್‌ಗಳಲ್ಲಿ 500/- ರೂ ಗೆ 0.00021 ಬಿಟ್ ಕಾಯಿನ್ ಸಹಾ ಕೊಳ್ಳಬಹುದು.**

**ಈ ಚಿತ್ರ ನೋಡಿ:**




ಅಂದರೆ - ಹೆಚ್ಚೆಚ್ಚು ಜನರು, ಹೆಚ್ಚು ಜನಪ್ರಿಯವಿರುವ, ವಹಿವಾಟು ಮಾಡುವ ಹೆಚ್ಚು ಜಗತ್ತಿನಲ್ಲಿ ಸಂಗ್ರಹವಾಗಿರುವ ನಾಣ್ಯಗಳು ಹೆಚ್ಚು ಬಾಳುತ್ತವೆ. (ಸ್ವಲ್ಪ ಷೇರು ಮಾರ್ಕೆಟ್ಟಿನಲ್ಲಿದ್ದಂತೆ), ಕಡಿಮೆ ಸಂಗ್ರಹ , ವಹಿವಾಟು ಮಾಡುವುವು ಕಡಿಮೆ ಬೆಲೆಗೆ.

5) **ಇದರಲ್ಲೂ ಅಮೆರಿಕನ್ ಡಾಲರಿಗೆ ಸಂಬಂಧಿತ ನಂಬಲರ್ಹ ಏರಿಳಿಯದ ಕಾಯಿನ್ ಯಾವುದು**.?

-ಜಗತ್ತಿನಲ್ಲೆಲ್ಲಾ ಡಾಲರಿನದೇ ದರ್ಬಾರು, ನಿಮಗೆ ಗೊತ್ತಿದೆ. ನಮ್ಮ ಭಾರತೀಯ ರೂ. 77 ಕ್ಕೆ ಈಗ ಒಂದು ಡಾಲರ್ ಸಿಗುತ್ತದೆ ( ಇದು ದಿನಾಲೂ ಬದಲಾಗುತ್ತಿರುತ್ತದೆ)

ಹಾಗೆಯೇ ಅಮೆರಿಕನ್ ಬಿಝಿನೆಸ್ಸ್ ಮತ್ತು ವಾಣಿಜ್ಯದಲ್ಲಿ ಲಿಂಕ್ ಆಗಿರುವ ಸ್ಟೇಬಲ್ ಕಾಯಿನ್ (ದೃಢ ನಾಣ್ಯಗಳು) ಎಂದು ಈಗ

I. ಬೈನ್ಯಾನ್ಸ್

II. ಯು ಎಸ್ ಡಿ ಕಾಯಿನ್

III. ಟೆದರ್

ಮುಂತಾದ ನಾಣ್ಯಗಳು **1 ಕ್ಕೆ 1 ಡಾಲರಿಗಿಂತಾ ಕಡಿಮೆ ಹೋಗಲಾರದು** ಎಂಬ ವಿಶ್ವಾಸದ ಮೇಲೆ ನಿಂತವು. ಇದರಲ್ಲಿ ವಿಪರೀತ ಏರಿಳತ ಇರುವುದಿಲ್ಲ ಎಂದು ನಂಬಲಾಗಿದೆ. ಆದರೂ ಕೆಲವೊಮ್ಮೆ ಅಮೆರಿಕನ್ ವಾಣಿಜ್ಯದಲ್ಲಿ ಅಲ್ಲಿನ ಪರಿಸ್ಥಿಗೆ ತಕ್ಕಂತೆ ಇವೂ ಏರಿಳಿಯುತ್ತಲೇ ಇವೆ.. ಆದರೆ ಮಿಕ್ಕ ನಾಣ್ಯಗಳಷ್ಟು ಅಲ್ಲ. ಅದಕ್ಕಾಗಿ ಇವನ್ನು 'ಸ್ಟೇಬಲ್' ( ದೃಢ, ನಿಶ್ಚಲ) ಎನ್ನುತ್ತಾರೆ. ಹಾಗಾಗಿ ಇವನ್ನು ಕೊಂಡು ಮಾರಿದರೆ ಹೆಚ್ಚಿನ ಲಾಭವೂ ಇಲ್ಲ, ನಷ್ಟವೂ ಇಲ್ಲ. ಎರಡೂ ಕಡಿಮೆ! ಇನ್ನೂ ಹೊಸದಾಗಿ alt coins, metacoins ಎಂಬುದೆಲ್ಲಾ ಪದಗಳು ಬಂದಿವೆ. ಆದರೆ ಆ ವಿಷಯ ಮುಂದೆ ಒಂದು ದಿನ ನೋಡುವ, ಈಗ ಬೇಡ.

## 6) ಮುಂದಿನ ಪ್ರಶ್ನೆ: ಎಲ್ಲಿ ಕೊಳ್ಳುವುದು ಮತ್ತು ಎಲ್ಲಿ ಹೇಗೆ ಮಾರುವುದು?

ಇದಕ್ಕೆ ಭಾರತದಲ್ಲಿ ಹಲವು ಕ್ರಿಪ್ಟೋ ಎಕ್ಸ್‌ಚೇಂಜುಗಳು (ವಿನಿಮಯ ಕೇಂದ್ರಗಳು) ಕಾರ್ಯನಿರತವಾಗಿವೆ: ಅಲ್ಲಿ ನಾವು ನಮ್ಮ ಹೆಸರು ಮತ್ತು ಕೆ ವೈ ಸಿ (**KYC**) ಅನ್ನು ದಾಖಲಿಸಿಕೊಂಡರೆ ಮುಂದೆ ವ್ಯವಹಾರ

ಮಾಡಬಹುದು. ಅವೆಲ್ಲವನ್ನು ನೀವು ಅಂತರ್ಜಾಲ ಸೈಟ್ ಅಥವಾ ಮೊಬೈಲ್ ಆ್ಯಪ್ ಮೂಲಕ ಸಂಪರ್ಕಿಸಿ ಸುಲಭವಾಗಿ ಖಾತೆ ತೆರೆಯಬಹುದು.

ಅವುಗಳಲ್ಲಿ ಜನಪ್ರಿಯ ಹಾಗೂ ದೊಡ್ಡ ಮೊತ್ತದ ಬಿಜಿನೆಸ್ ಮಾಡುವ ಎಕ್ಸ್ ಚೇಂಜುಗಳೆಂದರೆ:

i. **ಜೆಬ್ ಪೇ (Zebpay)**

ii. **ಕಾಯಿನ್ ಸ್ವಿಚ್ ಕುಬೇರ್ (Coinswitch Kuber)**

iii. **ಕಾಯಿನ್ ಡಿ ಸಿ ಎಕ್ಸ್ (CoinDCX)**


ಇವುಗಳಲ್ಲಿ ನೀವು ಭಾರತೀಯ ರೂ ಅನ್ನು ಅಲ್ಲಿ ವ್ಯಾಲೆಟ್ಟಿಗೆ ಜಮಾ ಮಾಡಲು ಹಲವು ಬ್ಯಾಂಕಿನ ನೆಟ್ ಬ್ಯಾಂಕಿಂಗ್ ಸೌಲಭ್ಯ ಅಥವಾ UPI ಬಳಸಬಹುದು. (ICICI, HDFC ಇತ್ಯಾದಿ)

ಉದಾಹರಣೆಗೆ- ನಾನು ಹೆಚ್ಚು ಬಳಸುವ Zebpay ನಲ್ಲಿ :

| #1. Deposit and Withdraw INR |
| --- |
| **You can deposit and withdraw Indian Rupees (INR) from your Zebpay account using net banking and UPI. The INR amount can be used for investing in cryptocurrency. Once you have Bitcoins, Ethereum or USDT, you can use them to buy other cryptocurrencies**. |

ಮಿಕ್ಕ ಮೇಲಿನ ಎರಡು ಎಕ್ಸ್ ಚೇಂಜುಗಳಲ್ಲಿಯೂ ನೀವು ಅವರ ನೆಟ್ ಬ್ಯಾಂಕಿಂಗ್ ಖಾತೆ ಉಪಯೋಗಿಸಿ ಹಣ ಹಾಕಿ, ತೆಗೆದು ಮಾಡಬಹುದು.

-ಇನ್ನೂ ಒಂದು ಇಂತದ್ದೇ ದೊಡ್ಡ ಎಕ್ಸ್ ಚೇಂಜ್ ಇದೆ- **Wazirx** ಮತ್ತು ಅವರದೇ **Binance** ಎಂದು. ಅದರಲ್ಲಿ ನನಗೆ ತಿಳಿದ ಮಟ್ಟಿಗೆ ನೆಟ್ ಬ್ಯಾಂಕಿಂಗ್ ಪದ್ಧತಿ ಇಲ್ಲವೇ ಇಲ್ಲ. ಅದೇನೋ **P2P** ವಿಧಾನದಲ್ಲಿ ಹಣ ಹಾಕಿ ಎನ್ನುತ್ತಾರೆ. ನನಗೆ ಅದು ಇಷ್ಟವೂ ಆಗಲಿಲ್ಲ, ಕಷ್ಟವೂ ಆಯಿತು. ಹಾಗಾಗಿ ನಾನು ವೈಯಕ್ತಿಕವಾಗಿ ಅದರಲ್ಲಿ ವ್ಯವಹಾರ ಮಾಡುವುದಿಲ್ಲ. (ಒಬ್ಬ ಓದುಗರು ಈ ಬಗ್ಗೆ ಕೇಳಿದ್ದರು).




**wazir x**

*ಇವರೆಲ್ಲಾ (ನಾನು ಮೇಲೆ ಹೇಳಿದ 3 ಎಕ್ಸ್‌ಚೇಂಜುಗಳು) ಒಂದೊಂದು ವ್ಯವಹಾರಕ್ಕೂ **0.20 -0.50 % ಫೀಸ್** ತೆಗೆದುಕೊಂಡು ಮಿಕ್ಕಿದ್ದು ನಿಮ್ಮ ಖಾತೆಗೆ ಜಮಾ ಮಾಡುತ್ತಾರೆ. ಅದರ ಬಗ್ಗೆ ಆಯಾ ಆಪ್ ಅಥವಾ ವೆಬ್ ಸೈಟಿನಲ್ಲಿ ಮಾಹಿತಿ ಇರುತ್ತದೆ. ಎಲ್ಲಿ ಅದು ಕಡಿಮೆ, ಯಾವುದರಲ್ಲಿ ನಿಮಗೆ ಸೌಕರ್ಯ ಜಾಸ್ತಿ ಎಂದು ನೀವೇ ಕಂಡುಹಿಡಿಯಬೇಕು*!

- **ಒಟ್ಟಿನಲ್ಲಿ ಯಾವುದಾದರೂ ಇಂತಹಾ ಒಂದೋ, ಎರಡು** ಎಕ್ಸ್ ಚೇಂಜುಗಳಲ್ಲಿ ನೀವು ರಿಜಿಸ್ಟರ್ ಮಾಡಿಕೊಳ್ಳಿ.
- ಅದರಿಂದ ನಿಮಗೆ ಈ ಕಾಯಿನ್ಸ್ ಬೆಲೆಯ ಬಗ್ಗೆ ಚಾಯ್ಸ್ ಅಥವಾ ಆಯ್ಕೆಯಿರುತ್ತದೆ. ಯಾವುದು ಎಲ್ಲಿ ಹೆಚ್ಚೋ ಅಲ್ಲಿ ಕೊಳ್ಳುವುದು ಮಾರುವುದು ಎಂದು.

**7) ರಿಜಿಸ್ಟರ್ ಮಾಡಿ ಖಾತೆ ತೆರೆಯುವುದು ಹೇಗೆ?**


**7.1 ನಿಮ್ಮ ಗೂಗಲ್, ಫೇಸ್ ಬುಕ್, ಇಮೇಲ್ ಖಾತೆ ಮತ್ತು ಪಾಸ್ ವರ್ಡ್ ಉಪಯೋಗಿಸಿ ಎಲ್ಲ ಸೈಟುಗಳಂತೆ ಇಲ್ಲಿಯೂ ಖಾತೆ ತೆರೆಯಿರಿ**

**7.2 ಅನಂತರ ಅವರು ಕೇಳಿದ ಮಾಹಿತಿಯನ್ನು ಭರ್ತಿ ಮಾಡಿ. ಮುಖ್ಯವಾಗಿ-**

- **ನಿಮ್ಮ ಸೆಲ್ಫೀ ಭಾವಚಿತ್ರ ( ಇದು ನನಗೆ ಯಾವಾಗಲೂ ಕಷ್ಟ. ನೋಡಲು ಸ್ಪಷ್ಟವಾಗಿಲ್ಲದಿದ್ದರೆ ಮತ್ತೆ ಮತ್ತೆ ಕೇಳುತ್ತದೆ!)**
- **ಪ್ಯಾನ್ ಕಾರ್ಡ್- ಮುಂದೆ ಮತ್ತು ಹಿಂದೆ**
- **ಆಧಾರ್ ಕಾರ್ಡ್- ಮುಂದೆ ಮತ್ತು ಹಿಂದೆ**

- **ಬ್ಯಾಂಕ್ ಖಾತೆ ವಿವರ. ಕೆಲವೊಮ್ಮೆ 3 ತಿಂಗಳು- 1 ವರ್ಷದ ಪಾಸ್ಬುಕ್ ಚಿತ್ರ (ಎಲ್ಲಾ ಕ್ಲಿಯರ್ ಚಿತ್ರ ಬಯಸುತ್ತಾರೆ. ಇಲ್ಲವೇ ಮತ್ತೆ ಮತ್ತೆ ಮಾಡಬೇಕಾದೀತು!)**

  **ಮೊಬೈಲಿನಲ್ಲಿ ಅನುಭವಸ್ತರಾದರೆ ನಿಮಗೆ ಇದೆಲ್ಲಾ ಕಷ್ಟವೇ ಆಗದು. ಕಷ್ಟವಾದರೆ ನಿಮ್ಮ ಅನುಭವೀ ಸ್ನೇಹಿತರ/ನೆಂಟರ ಸಹಾಯ ಪಡೆಯಿರಿ. (ಯಾರಿಗೂ ನಿಮ್ಮ ಬ್ಯಾಂಕ್ ಲಾಗಿನ್ ಪಾಸ್ವರ್ಡ್, ಖಾತೆ ಇತ್ಯಾದಿ ಹೇಳಬಾರದು!)**



**ಇದಕ್ಕಾಗಿ ನೀವು ಈ ಮೂರು-ನಾಲ್ಕು ಯೂ-ಟ್ಯೂಬ್ ವಿಡಿಯೋ ನೋಡಿ:**

https://www.youtube.com/watch?v=-LdlbWMHQ8I

https://www.youtube.com/watch?time_continue=2&v=JtHGYaANDnU&feature=emb_logo

https://www.youtube.com/watch?v=VIVlgPzw7_k

https://www.youtube.com/watch?time_continue=363&v=MLm-xsH_cl4&feature=emb_logo

-ಇದಲ್ಲದೇ ಕೆಲವು ಎಕ್ಸ್ಚೇಂಜುಗಳಲ್ಲಿ ನೀವು UPI, Phonepe, gpay ಮೂಲಕ ಸಹಾ ಆಯ್ಕೆ ಮಾಡಿಕೊಳ್ಳಬಹುದು.

-ಅದಕ್ಕೆ ತಕ್ಕ ವಿವರ ನೀಡಿ ಮೊಬೈಲಿನ OTP, fingerprint ಎಲ್ಲಾ ಕೊಡಬೇಕು.

-ಅವರ **ವೆಬ್ ಸೈಟುಗಳಲ್ಲಿಯೂ** ಇದೇ ರೀತಿ ಇರುತ್ತದೆ. ಅಲ್ಲಿಯೂ ನೀವು ಹೀಗೆ ಉಪಯೋಗಿಸಬಹುದು.

-**ನೀವು ಮೊಬೈಲ್ ಆಪ್ ಬಳಸಿದರೆ ಸುಲಭ ಎಂದು ನನ್ನ ಅನುಭವ**.

ಇವೆಲ್ಲಾ ಗೂಗಲ್ ಪ್ಲೇ ಸ್ಟೋರ್/ ಆಪಲ್ ಸ್ಟೋರಿನಲ್ಲಿ ಸಿಗುವಂತವೇ.

ಇಲ್ಲಿ ಆ ಲಿಂಕ್ಸ್ ಸಹಾ ಕೊಟ್ಟಿದ್ದೇನೆ:

ZebPay:

https://play.google.com/store/apps/details?id=zebpay.Application&utm_campaign=download-android&utm_medium=website&utm_source=zebpay.com/in/

CoinSwitch Kuber:

https://play.google.com/store/apps/details?id=com.coinswitch.kuber&referrer=utm_source=landingpc&utm_medium=landingpc

CoinDCX:


https://play.google.com/store/apps/details?gl=US&hl=en_IN&id=com.coindcx.btc&referrer=adjust_reftag%3DcFxtauivEaAgn%26utm_source%3DGo%2BLanding%2Bpage%26utm_campaign%3Dcoindcx_new_androidCTA%26utm_content%3DOrganic_coindcxnew_web%26utm_term%3DandroidCTA


**WazirX** ಮತ್ತು **Binance** ಸಹಾ ಗೂಗಲ್ ಪ್ಲೇಸ್ಟೋರಿನಲ್ಲಿದೆ. ಅವನ್ನೂ ಬಳಸಬಹುದು, ನಿಮ್ಮಿಷ್ಟ.

ಮೊದಲಿಗೆ ಒಂದೋ ಎರಡೋ ಆಪ್ ಟ್ರೈ ಮಾಡಿ.

ಹಣ ನೆಟ್ ಬ್ಯಾಂಕಿಂಗ್ ಮೂಲಕ ನೀವು ಒಮ್ಮೆ ವರ್ಗಾಯಿಸಿ ಆ್ಯಪ್ ನ ವ್ಯಾಲೆಟ್ಟಿನಲ್ಲಿ ಜಮಾ ಮಾಡಿದರೆ, ಅಲ್ಲಿನ **ಮಾರ್ಕೆಟ್/ ಎಕ್ಸ್ ಚೇಂಜ್** ಎಂಬಲ್ಲಿಗೆ ಹೋಗಿ ಎಲ್ಲಾ ಕಾಯಿನ್ನುಗಳ ದಿನವಹಿ ಬೆಲೆ ಲೆಕ್ಕ ನೋಡಬಹುದು.

ಉದಾಹರಣೆಗೆ ಈ ಸ್ಕ್ರೀನ್ ಶಾಟ್ ಚಿತ್ರಗಳು:-








ಇಲ್ಲಿನ ಪ್ರಕಾರ ನೀವು ನಿಮ್ಮ ವ್ಯಾಲೆಟ್ಟಿನಲ್ಲಿರುವ ಹಣ ಬಳಸಿ ಯಾವುದೇ ಕಾಯಿನ್ ಎಷ್ಟು ಆಗುತ್ತದೋ ಅಷ್ಟು ಕೊಳ್ಳಬಹುದು

ನಿಮ್ಮ ಖಾತೆಯಲ್ಲಿ ಇರುವ ನೀವು ಕೊಂಡಿರುವ  ಕ್ರಿಪ್ಟೋಕಾಯಿನ್ ಲೆಕ್ಕ ಹೀಗೆ ನಿಮಗೆ ಪೋರ್ಟ್‌ಫೋಲಿಯೋ ಎಂಬಲ್ಲಿ ಸದಾ ಲಭ್ಯ ಇರುತ್ತದೆ:-

ಉದಾಹರಣೆಗೆ ಎರಡು ಚಿತ್ರಗಳು-




(1) **( 2)**

**ಮೊದಲ ಚಿತ್ರದಲ್ಲಿ ಜೆಬ್ ಪೇ ಆಫ್ ನಲ್ಲಿ ಖಾತೆಯಲ್ಲಿರುವ ಕಾಯಿನ್ ಲೆಕ್ಕ ಮತ್ತು ಎರಡನೇ ಚಿತ್ರದಲ್ಲಿ ಕಾಯಿನ್ ಸ್ವಿಚ್ ಕುಬೇರ್ ಆಪ್ ನಲ್ಲಿ ಇರುವ ಕಾಯಿನ್ ಲೆಕ್ಕ ಕಾಣುತ್ತಿದೆ.**

**ಕೊನೆಯ ಮಾತುಗಳು:**

1) **ನಾನು ರೂ. 500 ರಿಂದ 2000 ರೂ ವರೆಗೆ ಚಿಕ್ಕ ಮೊತ್ತ ಮಾತ್ರ ಒಮ್ಮೊಮ್ಮೆ ಇನ್ವೆಸ್ಟ್ ಮಾಡುತ್ತೇನೆ. ನೀವು ಹಾಗೆಯೇ ಪ್ರಾರಂಭಿಸಿ. ಅದರಲ್ಲಿ ನಿಮಗೆ ವಿಶ್ವಾಸ ಬರುವವರೆಗೂ!**
2) **ಎರಡು ದಿನಕ್ಕೊಮ್ಮೆ ಮೂರು ದಿನಕ್ಕೊಮ್ಮೆ ನಿಮ್ಮ ಆಪ್ ತೆಗೆದು ಯಾವ ಕಾಯಿನ್ ಎಷ್ಟಕ್ಕೆ ಹೋಗಿದೆ ಎಂದು ಚೆಕ್ ಮಾಡುತ್ತಿರಿ. ಆತಂಕ ಬೇಡವಾದರೂ ಎಚ್ಚರಿಕೆ ಇರಲಿ! ಬಹಳ ನಷ್ಟ ಆಗುತ್ತಿದ್ದರೆ ಅದನ್ನು ಮಾರಿ ಇನ್ನ್ಯಾವುದೇ ಕಾಯಿನ್ ಅದೇ ಎಕ್ಸ್ ಚೇಂಜಿನಲ್ಲಿ ಕೊಳ್ಳಬಹುದು.. (ಮ್ಯುಚುಯಲ್ ಫಂಡ್ಸ್, ಶೇರಿನ ತರಹ ತಾಳ್ಮೆ ಮತ್ತು ಎಚ್ಚರಿಕೆ ಎರಡೂ ಇರಬೇಕು)**
3) **ಅಂತರ್ಜಾಲದಲ್ಲಿ ಚೆಕ್ ಮಾಡಿ Is it a good time to sell or buy (coin name)... ಎಂದು ಆ ಕಾಯಿನ್ ಬಗ್ಗೆ ಪತ್ತೆ ಮಾಡಿ. ಆನಂತರ ಅಲ್ಲಿಯೇ 'ಸೆಲ್ ' ಮಾಡಿ. ಅದರಿಂದ ಬಂದ ನಿಮ್ಮ ರೂಪಾಯಿ ಹಣ ನೀವು ವಾಪಸ್ ನಿಮ್ಮ ಬ್ಯಾಂಕಿಗೆ ಹಾಕಿಕೊಳ್ಳಬಹುದು ಅಥವಾ ಅಲ್ಲೇ ಬಿಡಬಹುದು ಮತ್ತು ಯಾವಾಗಲಾದರೂ ಬೇರೆ ಕಾಯಿನ್ ಸಹಾ ಕೊಳ್ಳಬಹುದು.**
4) **ಇದರಲ್ಲಿ ಒಮ್ಮೆಲೆ ಕುದುರೆ ರೇಸಿನ ತರಹ/ ಲಾಟರಿ ಜ್ಯಾಕ್ ಪಾಟ್ ತರಹ ಹಣ ಸಿಗುವುದಿಲ್ಲ. ನಿಧಾನವಾಗಿ ಹಣ ಸೇರಬಹುದು. ಕಾದು ನೋಡಬೇಕು. 3 ತಿಂಗಳು- 6 ತಿಂಗಳು ದುಡ್ಡು ಹಾಕಿ**

**ಏನಾಗುತ್ತಿದೀಂದು ಸುಮ್ಮನೆ ಗಮನಿಸಿ. ಅನಂತರ ಮಾರಬೇಕೋ, ಇನ್ನೂ ಕೊಳ್ಳಬೇಕೋ ಎಂದು ಚಿತ್ರ ಸ್ಪಷ್ಟವಾದಾಗ ಮುಂದಿನ ಹೆಜ್ಜೆಯಿಡಿ. ಒಮ್ಮೆಲೇ 10,000 ರೂ-30,000 ರೂ ಹಾಕಲು ಹೋಗಬೇಡಿ. ಸ್ಲೋ ಅಂಡ್ ಸ್ಟೆಡಿ ಯಾಗಿ ಆಮೆ ವೇಗದಲ್ಲೇ ಆಗಲಿ, ಪರವಾಗಿಲ್ಲ. ನಮ್ಮ ಜಾಗ್ರತೆಯಲ್ಲಿ ನಾವಿರೋಣ. ಹೀಗೆ ನೀವು ನಷ್ಟದ ರಿಸ್ಕ್ ಕಡಿಮೆ ಮಾಡಿಕೊಳ್ಳಬಹುದು ಎಂದು ಈ ಮಾತು. ಉದಾಹರಣೆಗೆ- ಯಾರೋ ಬಿಟ್ ಕಾಯಿನ್ನುಗಳನ್ನು ಮೊದಲು 2009 ರಲ್ಲಿ ಕೆಲವೇ ರೂಪಾಯಿಗೆ ಕೊಂಡವರು ಇದೀಗ ಅದರ ಬೆಲೆ 24 ಲಕ್ಷ ರೂ  ಆದಾಗ ಅದರ ದೊಡ್ಡ ಲಾಭ ಪಡೆಯುತ್ತಿಲ್ಲವೆ? ಹಾಗೆ. ಚಿಕ್ಕದಾಗಿಯೇ ಶುರು ಮಾಡಿ. ನಿಮ್ಮ ಎಲ್ಲ ಉಳಿತಾಯವನ್ನು ಇದಕ್ಕೇ ಸುರಿಯಲೂ ಬೇಡಿ. ಲಾಂಗ್ ಟರ್ಮಿನಲ್ಲಿ (ಅಧಿಕ ಕಾಲಾವಧಿಯಲ್ಲಿ) ಏನಾಗಬಹುದು ಗೊತ್ತಿಲ್ಲ, ಗಮನಿಸುತ್ತಿರಬೇಕು.**

**5)  ಆರ್ಥಿಕ ಸಂಕಷ್ಟದ ಸಮಯದಲ್ಲಿ ಅಂದರೆ ಕೋವಿಡ್ ತರಹ ಮಹಾಮಾರಿ ಹರಡಿದಾಗ, ಯುದ್ಧ ಭೀತಿ ಇದ್ದಾಗ (ರಷ್ಯಾ- ಯುಕ್ರೇನ್ ಯುದ್ಧ ದಂತೆ) ಅಥವಾ ದೇಶದ ಹಣಕಾಸಿನ ಪರಿಸ್ಥಿತಿ ಕೆಟ್ಟಿದೆಯೆಂದು ಮೆಲ್ಟ್ ಡೌನ್ / ಸ್ಲೋ ಡೌನ್/ ಡಿಪ್ರೆಶನ್ ಎಂದು ಹೇಳುತ್ತಾರಲ್ಲ- ಆಗೆಲ್ಲಾ ಮಾರ್ಕೆಟ್ ಡೌನ್ ಇದೆ ಎನ್ನುತ್ತಾರೆ. ಆಗ ನಿಮಗೆ ಎಲ್ಲಾ ಕಾಯಿನ್ನುಗಳೂ ರೆಡ್ ಅಂದರೆ ಕಡಿಮೆ ಬೆಲೆಗೆ ಹೋಗುತ್ತಿರುತ್ತವೆ. ಇದನ್ನೆಲ್ಲಾ ಒಬ್ಬ ಹೂಡಿಕೆದಾರ ಸಹಿಸಿಕೊಳ್ಳಬೇಕು.**

**6) ಭಾರತದ ರಿಸರ್ವ್ ಬ್ಯಾಂಕಿನ ಡಿಜಿಟಲ್ ರುಪೀ ಎಂಬ ನಾಣ್ಯ ಬರುತ್ತದೆ ಎಂದು ಸರ್ಕಾರ ಹೇಳಿದೆ. ಅದು ಸಹಾ ಶಿಶುವಿನಂತೆ ಈ ಮಾರ್ಕೆಟಿಗೆ ಹೆಜ್ಜೆಯಿಡುತ್ತದೆ. ಅದರ ಭವಿಷ್ಯ ಸಹಾ ಹಾಗೆ ಕೊಂಡು ನೋಡಬೇಕಾಗುತ್ತದೆ.**

**7) ಒಟ್ಟಿನಲ್ಲಿ ತಿಂಗಳಿಗೆ 500/- ಅಥವಾ ನಿಮ್ಮ ಉಳಿತಾಯದ 5% ಇದಕ್ಕೆ ಮೀಸಲಿಟ್ಟರೆ ಹೆಚ್ಚು ಭಾಧಕವಿಲ್ಲ ಎಂದು ನನಗೆ ನನ್ನ ಫೈನ್ಯಾನ್ಸ್ ಕನ್ಸಲ್ಟೆಂಟ್ ಸಲಹೆ ಕೊಟ್ಟರು. ನಿಮ್ಮ ಅನುಕೂಲ ನೋಡಿಕೊಳ್ಳಿ.**

**8) ಇದಕ್ಕೂ ಮುನ್ನ ನಿಮಗೆ ಶೇರು ಮಾರ್ಕೆಟ್ ಮತ್ತು ಮ್ಯೂಚುಯಲ್ ಫಂಡ್ ಅನುಭವವಿದ್ದರೆ ಸ್ವಲ್ಪ ಹೆಚ್ಚು ಧೈರ್ಯ ಬರುತ್ತದೆ ಎಂದು ನನ್ನ ಭಾವನೆ.**

**9) ಹೆಚ್ಚಿನ ಮಾಹಿತಿಗಾಗಿ ನಾನು ಓದಿದ ರೆಫ್ಫೆರೆನ್ಸು ಪುಸ್ತಕಗಳು:**

- **ನಿಗೂಢ ನಾಣ್ಯ** – ವಿಠ್ಠಲ್ ಶೆಣೈ (ಇವು ಹೇಗೆ ತಾಂತ್ರಿಕವಾಗಿ ಶುರುವಾದವು, ಇದರ ಚರಿತ್ರೆಯೇನು ಎಂಬುದೆಲ್ಲಾ ಇದೆ)
- ದಿನಪತ್ರಿಕೆ ವರದಿಗಳು ಮತ್ತು ಯೂಟ್ಯೂಬ್ ಲಿಂಕ್ಸ್ ಆಗಲೇ ಕೊಟ್ಟಿದ್ದೇನೆ
- ಈ ಎಕ್ಸ್ಚೇಂಜುಗಳ ಟ್ರೈನಿಂಗ್ ವಿಡಿಯೋ ಸಹಾ ಅವರ ವೆಬ್ ಸೈಟುಗಳಲ್ಲಿ ಇವೆ. ಅವನ್ನು ನೋಡಿ ನೀವು ಹೆಚ್ಚು ತಿಳಿದುಕೊಳ್ಳಬಹುದು.

ನಿಮಗೆ ಶುಭವಾಗಲಿ!